**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 17/2025**

**ಸಿ.ಡಬ್ಲ್ಯೂಃ 5, ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರು : ಅಬ್ದುಗನಿ
ತಂದೆಯ ಹೆಸರು : ಆರಿಫ್ ಮೊತಿಯಾ
ವಯಸ್ಸು : 38 ವರ್ಷ
ಉದ್ಯೋಗ : ಹಲ್ವ ವ್ಯಾಪಾರ
ವಾಸ್ತವ್ಯ : ಸುಲ್ತಾನ್‌ಸ್ಟ್ರೀಟ್ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 17/10 /2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ದಿಃ 29.11.2024 ರಂದು ರಂಗಿನ ಕಟ್ಟೆಯ ಹತ್ತಿರ ಅಪಘಾತವಾಗಿತ್ತು. ಆಗ ನಾನು ಅಲ್ಲಿ ಚಹ ಕುಡಿಯುತ್ತಿದ್ದೇನು. ಸದರಿ ಅಪಘಾತ ಸಂಜೆ 5.00 ರಿಂದ 6.00 ಗಂಟೆಯ ನಡುವೆ ಆಗಿತ್ತು. ಸದರಿ ಪ್ರಕರಣದ ಆರೋಪಿಯು ನನ್ನ ಮಾವ ರಸ್ತೆ ದಾಟುವಾಗ ಬಂದು ಡಿಕ್ಕಿ ಹೊಡೆದು ಅಪಘಾತ ಮಾಡಿದ್ದು ಇರುತ್ತದೆ. ಗಾಡಿ ನಂಬರ್ ಕೆಎ 47 ಇಎ 3076 ಹೊಂಡಾ ಗಾಡಿ ಆಗಿತ್ತು. ಗಾಡಿಯ ಸೈಲೆನ್ಸರ್ ಜಖಂ ಆಗಿತ್ತು. ಪೊಲೀಸರು ಪಂಚನಾಮೆಗೆ ಬಂದಿದ್ದರು. ನಾನು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆ ಕಾಲಕ್ಕೆ ಪೊಟೋ ತೆಗೆದಿರುತ್ತಾರೆ. ಸದರಿ ಪೋಟೋವನ್ನು ಸಾಕ್ಷಿ ಗುರುತಿಸಿರುತ್ತಾರೆ. ಅಲ್ಲಿ ನಕ್ಷೆ ತಯಾರಿಸಿರುತ್ತಾರೆ.

2. ಸಾಕ್ಷಿಯು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕಚ್ಚಾ ನಕಾಶೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 4 ಪೊಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ- 6 ರಿಂದ 9 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎಮ್ ಹೆಚ್ ಎನ್ ವಕೀಲರಿಂದ,**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಪಂಚನಾಮೆಯಲ್ಲಿ ಬರೆದ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಪೊಲೀಸರ ಹೇಳಿಕೆ ಮೇರೆಗೆ ಬರೆಯಲಾಗಿದೆ. ಠಾಣೆಯಲ್ಲಿ ನಾನು ಸಹಿ ಮಾಡಿರುತ್ತೇನೆ ಆದರೆ ಎಷ್ಟು ಸಹಿ ಮಾಡಿದ್ದೇನೆ ಎಂದರೆ ನೆನಪಿಲ್ಲ. ಪೊಲೀಸರು ಠಾಣೆಯಲ್ಲಿ ಪಂಚನಾಮೆ ಹಾಗು ನಕ್ಷೆಯನ್ನು ತಯಾರಿಸಿದ್ದು ಅದಕ್ಕೆ ನಾನು

ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೃತರು ನನ್ನ ಸ್ನೇಹಿತನ ಮಾವ ಆಗಿದ್ದಾರೆ. ನನಗೆ ಸದರಿ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ನನ್ನ ಸ್ನೇಹಿತನ ಮಾವ ಆಗಿದ್ದ ಕಾರಣ ಅವರಿಗೆ ವಿಮಾ ಪರಿಹಾರ ಸಿಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**